ತುಮಕೂರು ರಸ್ತೆಯ ಬೆಂಗಳೂರು ಉತ್ತರ ತಾಲ್ಲೂಕು ದಾಸನಪುರ ಹೋಬಳಿ, ಪಿಲ್ಲಹಳ್ಳಿ, ಶೇಷಗಿರಿ ಪಾಳ್ಯ, ಮತ್ತಹಳ್ಳಿ, ಒಡೆಯರಹಳ್ಳಿ, ಮತ್ತು ಹೊನ್ನಸಂದ್ರ ಗ್ರಾಮದ ಪ್ರದೇಶಗಳಲ್ಲಿ ಮಾರುಕಟ್ಟೆ ಪ್ರಾಂಗಣಕ್ಕಾಗಿ 188.09 1/2 ಎಕರೆ ಖಾಸಗಿ ಜಮೀನು ಮತ್ತು 168.27 ಎಕರೆ ಸರ್ಕಾರಿ ಜಮೀನು ಒಟ್ಟು 356.36 1/2 ಎಕರೆ ಜಮೀನು ಭೂಸ್ವಾಧೀನ ಕ್ರಮ ಪ್ರಗತಿಯಲ್ಲಿದೆ. ಖಾಸಗಿ ಜಮೀನಿನ ಸಂಬಂಧ ರೂ. 13,01,47,000/– ಹಣವನ್ನು ಭೂಸ್ವಾಧೀನ ಅಧಿಕಾರಿಗಳಲ್ಲಿ ಠೇವಣಿ ಇಡಲಾಗಿದೆ. 9.19 ಎಕರೆ ಜಮೀನಿನ ಭೂ ಮಾಲೀಕರು ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಭೂಸ್ವಾಧೀನ ಪ್ರಕ್ರಿಯೆ ಪ್ರಶ್ನಿಸಿ ರಿಟ್ ಅರ್ಜಿ ಸಲ್ಲಿಸಿದ್ದು ವಿಚಾರಣೆಯಲ್ಲಿದೆ. ಒಟ್ಟು ಜಮೀನಿನಲ್ಲಿ 140.24 1/2 ಎಕರೆಗೆ Consent award ಹಾಗೂ ಉಳಿದ 47.25 ಎಕರೆಗೆ ಜನರಲ್ ಅವಾರ್ಡ್ ನಿಗಧಿಪಡಿಸಿ, ಸರ್ಕಾರದ ಅನುಮೋದನೆಗೆ ಭೂಸ್ವಾಧೀನ ಅಧಿಕಾರಿಗಳು ಸಲ್ಲಿಸಿದ್ದಾರೆ. 168.27 ಎಕರೆ ಸರ್ಕಾರಿ ಜಮೀನನ್ನು ಕಂದಾಯ ಇಲಾಖೆಯಿಂದ ವರ್ಗಾಯಿಸುವ ಕುರಿತು ಸರ್ಕಾರದ ಪರಿಶೀಲನೆಯಲ್ಲಿದೆ.

ಬೆಂಗಳೂರಿನ ಪಡಿತರ ಚೀಟಿದಾರರಿಗೆ ಸೀಮೆಎಣ್ಣೆ ಕೂಪನ್ ವಿತರಿಸುವುದರ ಬಗ್ಗೆ

2390 (3051) : ಶ್ರೀ ಸುರೇಶ್ ಕುಮಾರ್ ಎಸ್. ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಪಡಿತರ ಚೀಟಿಗಳಿಗೆ 2003ನೇ ಸಾಲಿನಲ್ಲಿ ವಿತರಿಸಬೇಕಾಗಿದ್ದ ಸೀಮೆಎಣ್ಣೆ ಕೂಪನನ್ನು ಈಗಾಗಲೇ ಮುದ್ರಿಸಿದ್ದರೂ ಸಹ ಬೆಂಗಳೂರಿನಲ್ಲಿ ಇದುವರೆವಿಗೂ ಯಾವ ಕಾರಣಕ್ಕೆ ವಿತರಿಸಿಲ್ಲ;

ಆ) ಹಸಿರು ಪಡಿತರ ಚೀಟಿಯ ಬದಲಾಗಿ ಹಳದಿ ಪಡಿತರ ಚೀಟಿಯನ್ನು ವಿತರಿಸಲಾಗಿದ್ದು ಅದಕ್ಕೆ ವಿತರಿಸುವ ಅಕ್ಕಿ ಏನ್ನು ಪ್ರತಿ ಕೆ.ಜಿ.ಗೆ ರೂ. 6.00 ರಂತೆ ವಿತರಿಸಲಾಗುತ್ತಿದೆ. ಆದರೆ ಕೇಂದ್ರ ಸರ್ಕಾರದಿಂದ ಹಳದಿ ಪಡಿತರ ಚೀಟಿಗೆ (ಕಡು ಬಡವರಿಗೆ ವಿತರಿಸುವ ಪಡಿತರ ಚೀಟಿ) ವಿತರಿಸಬೇಕಾಗಿರುವ ಅಕ್ಕಿಯ ಬೆಲೆ ರೂ. 3.50 ಈ ವ್ಯತ್ಯಾಸಕ್ಕೆ ಕಾರಣವೇನು;

ಇ) ಈಗಾಗಲೇ ನಗರದಲ್ಲಿರುವ (ಬೆಂಗಳೂರು) ಕಡುಬಡವರಿಗೆ ಹಳದಿ ಪಡಿತರ ಚೀಟಿ ವಿತರಿಸಲು ಪಡೆದಿರುವ ಅರ್ಜಿಗಳನ್ನು ಪರಿಶೀಲಿಸಿ ಎಷ್ಟು ದಿವಸಗಳಲ್ಲಿ ಪಡಿತರ ಚೀಟಿಯನ್ನು ವಿತರಿಸಲಾಗುತ್ತದೆ?

ಶ್ರೀ ರಾಮಲಿಂಗಾರೆಡ್ಡಿ (ಆಹಾರ ಮತ್ತು ನಾಗರಿಕರ ಸರಬರಾಜು ಸಚಿವರು)

ಅ) ಈಗಾಗಲೇ ಹಳದಿ ಪಡಿತರ ಚೀಟಿಗಳಿಗೆ ಸೀಮೆಎಣ್ಣೆ ಕೂಪನ್‌ಗಳನ್ನು ವಿತರಿಸಲಾಗಿದೆ. ಎ.ಪಿ.ಎಲ್. ಪಡಿತರ ಚೀಟಿದಾರರಿಗೂ ಜುಲೈ 2003ರ ಮಾಹೆಯಿಂದ ಸೀಮೆಎಣ್ಣೆ ಕೂಪನ್ ವಿತರಿಸಲು ಕ್ರಮ ಕೈಗೊಳ್ಳಲಾಗಿರುತ್ತದೆ.

ಆ) ಹಸಿರು ಪಡಿತರ ಚೀಟಿದಾರರಿಗೆ ಅಕ್ಕಿಯ ಬೆಲೆಯನ್ನು ಪ್ರತಿ ಕೆ.ಜಿ. ಒಂದಕ್ಕೆ ರೂ. 6–15ರಂತೆ ಹಾಗೂ ಹಳದಿ ಪಡಿತರ ಚೀಟಿದಾರರಿಗೆ ಪ್ರತಿ ಕೆ.ಜಿ. ಒಂದಕ್ಕೆ ಅಕ್ಕಿಯ ಬೆಲೆಯನ್ನು ರೂ. 3–50 ರಂತೆ ಮೊದಲ 8 ಕೆ.ಜಿ. ಅಕ್ಕಿಯನ್ನು, 20 ಕೆ.ಜಿ. ಅಕ್ಕಿಯನ್ನು ಕೆ.ಜಿ. ಒಂದಕ್ಕೆ ರು. 6–15ರ ದರದಲ್ಲಿ ವಿತರಿಸಲಾಗುತ್ತಿದೆ. ಕರ್ನಾಟಕ ಸರ್ಕಾರವು ಎಲ್ಲ ನೈಜ ಬಿ.ಪಿ.ಎಲ್. ಕುಟುಂಬಗಳಿಗೆ ಸಹಾಯಧನಯುಕ್ತ ದರದಲ್ಲಿ ಆಹಾರಧಾನ್ಯಗಳನ್ನು ಒದಗಿಸುತ್ತಿರುವುದರಿಂದ ಈ ವ್ಯತ್ಯಾಸಕ್ಕೆ ಕಾರಣವಾಗಿರುತ್ತದೆ.

ಇ) ಈಗಾಗಲೇ ಸ್ವೀಕರಿಸಲಾಗಿರುವ ಅರ್ಜಿಗಳನ್ನು ಆದ್ಯತೆಯ ಮೇರೆಗೆ ಪರಿಶೀಲಿಸಿ ಎಲ್ಲಾ ನೈಜ ಬಿ.ಪಿ.ಎಲ್. ಕುಟುಂಬಗಳಿಗೆ ಹಳದಿ ಪಡಿತರ ಚೀಟಿಯನ್ನು ದಿನಾಂಕ: 15.9.2003 ರಿಂದ ವಿತರಿಸಲಾಗುವುದು.

ತೋಟಗಾರಿಕೆ ಇಲಾಖೆಯಲ್ಲಿ ರಜೆ ನಗದೀಕರಣದಲ್ಲಿ ನಡೆದಿರುವ ಅವ್ಯವಹಾರ ಕುರಿತು

2391 (2857) : ಶ್ರೀ ಯೋಗೀಶ್ ಭಟ್ ಎನ್. (ಮಂಗಳೂರು) ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತೋಟಗಾರಿಕೆ ಇಲಾಖೆಯಲ್ಲಿನ ನೌಕರರ ರಜೆ ನಗದೀಕರಣದಲ್ಲಿ ಅವ್ಯವಹಾರಗಳು ನಡೆದಿರುವುದು ನಿಜವೇ (ಅವ್ಯವಹಾರದ ಪೂರ್ಣ ವಿವರ ನೀಡುವುದು);

ಆ) ಈ ಅವ್ಯವಹಾರಗಳಲ್ಲಿ ಎಷ್ಟು ಜನರನ್ನು ತಪ್ಪಿತಸ್ಥರೆಂದು ಗುರುತಿಸಲಾಗಿದೆ; ಇವರುಗಳ ಮೇಲೆ ಯಾವ ತನಿಖೆ ನಡೆಸಲಾಗಿದೆ;

ಇ) ಪೊಲೀಸ್ ತನಿಖೆಯಲ್ಲಿ ಈ ಅವ್ಯವಹಾರ ಸಾಬೀತಾಗಿರುವುದು ನಿಜವೇ ತನಿಖೆಯ ವರದಿಯ ಪ್ರಮುಖ ಅಂಶಗಳೇನು;

ಈ) ಪೊಲೀಸ್ ತನಿಖೆಯಲ್ಲಿ ಅವ್ಯವಹಾರ ಸಾಬೀತಾದ ಮೇಲೆ ಮತ್ತೆ ಈ ಪ್ರಕರಣವನ್ನು ತನಿಖೆಗೆಂದು ಲೋಕಾಯುಕ್ತಕ್ಕೆ ಒಪ್ಪಿಸಲಾಗಿದೆಯೇ ಇದರ ಅಗತ್ಯತೆ ಏನು?

ಶ್ರೀ ಎಂ. ಶಿವಣ್ಣ (ತೋಟಗಾರಿಕೆ ಸಚಿವರು)

ಅ) ನಿಜ

ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಭೂದೃಶ್ಯ) ಕಛೇರಿಗೆ ಸಂಬಂಧಿಸಿದಂತೆ ರೂ. 89,480/– ಮೊತ್ತದ ರಜೆ ನಗದೀಕರಣ ಬಿಲ್ಲನ್ನು ಜುಲೈ 02ರ ಮಾಹೆಯಲ್ಲಿ ಖಜಾನೆಗೆ ಸಲ್ಲಿಸಿದ್ದಾಗ ಈ ಬಗ್ಗೆ ಅನುಮಾನಗೊಂಡ ಖಜಾನೆ ನಿರ್ದೇಶಕರು ತೋಟಗಾರಿಕೆ ನಿರ್ದೇಶಕರ ಗಮನಕ್ಕೆ ವಿಷಯವನ್ನು ತಂದಿದ್ದು ನಂತರ ಈ ಬಗ್ಗೆ ಇಲಾಖಾ ಅಧಿಕಾರಿಗಳಿಂದ ಪ್ರಾಥಮಿಕ ತನಿಖೆ ನಡೆಸಲಾಯ್ತು. ಆಗಸ್ಟ್ 01 ರಿಂದ ಜುಲೈ 02 ರ ಮಾಹೆವರೆಗೆ ಸಿಬ್ಬಂದಿಯವರ ಗಳಿಕೆ ರಜೆ ನಗದೀಕರಣ ಸಂಬಂಧವಾಗಿ ಖಜಾನೆಯಿಂದ ಒಟ್ಟು ರೂ. 25,54,468/– ನ್ನು ನಗದೀಕರಿಸಿರುವುದು ತನಿಖಾ ವರದಿಯಿಂದ ಕಂಡು ಬಂದಿರುತ್ತದೆ. ಈ ಹಿನ್ನೆಲೆಯಲ್ಲಿ ಈ ಅವಧಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದ 4 ಅಧಿಕಾರಿ/ಸಿಬ್ಬಂದಿ ವರ್ಗದವರನ್ನು ಅಮಾನತ್ತುಗೊಳಿಸಿ ತನಿಖೆಗಾಗಿ ಸ್ಥಳೀಯ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲಾಗಿದೆ. ಹಾಗೂ ಸರ್ಕಾರವು ಆದೇಶ ಸಂ: ಕೃತೋಇ 255/ತೋಸೇಪ 2002 ದಿನಾಂಕ: 21/5/03ರಲ್ಲಿ ಆದೇಶ ಹೊರಡಿಸಿ ಪ್ರಕರಣವನ್ನು ಲೋಕಾಯುಕ್ತಕ್ಕೆ ವಹಿಸಿದೆ. ಪೋಲಿಸ್/ಲೋಕಾಯುಕ್ತರವರ ತನಿಖಾ ವರದಿ ನಿರೀಕ್ಷಿಸಲಾಗುತ್ತಿದೆ.

ಆ) ಸದರಿ ಪ್ರಕರಣದಲ್ಲಿ ಮೇಲ್ನೋಟಕ್ಕೆ ಭಾಗಿಗಳಾದ ಸಿಬ್ಬಂದಿಗಳ ವಿವರ ಈ ಕೆಳಗಿನಂತೆ ಇರುತ್ತದೆ.

1. ಶ್ರೀ ಎಸ್.ಕೆ. ಮದ್ದಿರೆಡ್ಡಿ ಹಿಂದಿನ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಭೂದೃಶ್ಯ) ಲಾಲಬಾಗ್ ಬೆಂಗಳೂರು ಹಾಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ.